ಇದರ ಬಗ್ಗೆ ಪತ್ರ ಕೂಡ ಬರೆದಿದ್ದೇನೆ, ಏನು ಕ್ರಮ ತೆಗೆದುಕೊಂಡಿದ್ದೀರಿ? 4 ಲಕ್ಷ ರೂಪಾಯಿ ಬೆಲೆ ಬಾಳುವ ಸಾಗುವಾನಿ ಮರ ನಾಶವಾಗಿದೆ. ಇದರ ಬಗ್ಗೆ ನನಗೆ ಉತ್ತರ ಬೇಕು. ಇದನ್ನು ಸರ್ಕಾರದ ಗಮನಕ್ಕೆ ತಂದರೂ.....

12.00 ನೂನ್

ಅವರು ಬಂದಿಲ್ಲ ಅಂದರೆ ಯಾವರೀತಿ ಬಂದಿಲ್ಲ ಎಂದು ಹೇಳಬೇಕಾಗುತ್ತದೆ. ನಾನು ಸುಳ್ಳು ಹೇಳಿರಬೇಕು ಇಲ್ಲ ಅಂದರೆ ಅವರು ಸುಳ್ಳು ಹೇಳುತ್ತಿರಬೇಕು ಎಂದು ಆಗುತ್ತದೆ. ನಾವು ಅವರಿಗೆ ಟೆಲಿಗ್ರಾಮ್ ಕೊಟ್ಟರೂ ಕೂಡ ಸರ್ಕಾರಕ್ಕೆ ಯಾವುದೇ ವರದಿ ಬಂದಿಲ್ಲ ಅಂದರೆ ಸರ್ಕಾರ ಇದೆಯೇ ಎಂದು ಕೇಳಬೇಕಾಗುತ್ತದೆ. ತಮಗೆ ಕೊಟ್ಟಿದ್ದೇನೆ, ರೂರಲ್ ಡೆವಲಪ್ಮೆಂಟ್ ಮಿನಿಸ್ಟರ್ಗೆ ಕೊಟ್ಟಿದ್ದೇನೆ, ನನಗೆ 20 ರೂಪಾಯಿ ಖರ್ಚಾಗಿದೆ. ಅವರು ಬಂದಿಲ್ಲ ಅಂದರೆ ಹೇಗೆ ಬಂದಿಲ್ಲ ಎಂದು ಹೇಳಬೇಕಾಗುತ್ತದೆ. ಅವರು ಫೈಲನ್ನು ತೆಗೆಸಿ ನೋಡಿ ಹೇಳಲಿ. ಸರ್ಕಾರದ ನಾಲ್ಕೈದು ಲಕ್ಷ ರೂಪಾಯಿ ಆಸ್ತಿ ಹಾಳಾಗಿದೆ ಅಂದರೆ ಇದಕ್ಕೆ ಹೊಣೆ ಯಾರು ಎಂದು ಕೇಳಬೇಕಲ್ಲವೆ? ಇವರು ಶಾಲೆ ರಿಪೇರಿ ಮಾಡಿಸಲಿ ಆದರೆ ಈಗ ಹಾಳಾಗಿರುವುದನ್ನು ಕೊಡುವವರು ಯಾರು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ: ಈ ಎರಡೂ ಬಿಲ್ಡಿಂಗ್ಗಳು ರಿಪೇರಿ ಮಾಡುವ ಸ್ಥಿತಿಯಲ್ಲಿ ಇಲ್ಲ. ಈ ಎರಡೂ ಬಿಲ್ಡಿಂಗ್ಗಳನ್ನು ಕೆಡವಿ ಹೊಸ ಬಿಲ್ಡಿಂಗ್ ಕಟ್ಟಲಿಕ್ಕೆ ತೀರ್ಮಾನ ಆಗಿದೆ. ಈಗ ಅವರು ಹೇಳುತ್ತಿರುವ ವಿಚಾರ ಅಂದರೆ ಈ ಬಿಲ್ಡಿಂಗ್ನಲ್ಲಿದ್ದ ಕಿಟಕಿ ಬಾಗಿಲುಗಳನ್ನು ಕದ್ದುಕೊಂಡು ಹೋಗುತ್ತಿದ್ದಾರೆ, ಅದನ್ನು ತೆಗೆದುಕೊಂಡು ಹೋಗಲಿಕ್ಕೆ ಬಿಡಬಾರದು ಎಂದು ಹೇಳುತ್ತಿದ್ದಾರೆ. ಅದರ ಬಗ್ಗೆ ಜಿಲ್ಲಾಪಂಚಾಯತ್ ಕಾರ್ಯದರ್ಶಿಯವರಿಗೆ ನಾನು ಈಗಾಗಲೇ ತಿಳಿಸಿದ್ದೇನೆ.

ಶ್ರೀ ಸಿ. ಬೈರೇಗೌಡ: ಅಲ್ಲಿ ಹಳೆಯ ಕಾಲದ ಕಟ್ಟಡ ಇರಬಹುದು, ಆದರೆ ಅಲ್ಲಿರತಕ್ಕಂಥ ತೇಗದ ಮರ ಏನಿದೆ, ಅದರ ಬೆಲೆ ಸುಮಾರು ಎರಡು, ಮೂರು ಲಕ್ಷ ರೂಪಾಯಿ ಆಗುತ್ತಿತ್ತು, ಆ ಮರವನ್ನು ಕದ್ದುಕೊಂಡು ಹೋಗಿದ್ದಾರೆ. ಅದಕ್ಕೋಸ್ಕರ ಟೆಲಿಗ್ರಾಮ್ ಕೊಟ್ಟಿದ್ದೇನೆ, ಅದರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳುತ್ತಿದ್ದಾರೆ. ಅದಕ್ಕೆ ತಾವು ಉತ್ತರ ಹೇಳಬೇಕು.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ: ಈ ಎರಡೂ ಶಾಲೆಗಳಲ್ಲಿದ್ದ ಮೂರ್ನಾಲ್ಕು ಲಕ್ಷ ರೂಪಾಯಿ ಬೆಲೆಯ ಮರ ತೆಗೆಮಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ. ಆದರೂ ಸಹ ಇನ್ನು ಮುಂದೆ ಅದು ಆಗದೇ ಇರುವಂತೆ ನಾನು ಅವರಿಗೆ ತಿಳಿಸುತ್ತೇನೆ. ಇದು ರಿಪೇರಿ ಮಾಡುವ ಸ್ಥಿತಿಯಲ್ಲಿ ಇಲ್ಲದೇ ಇರುವುದರಿಂದ ಹೊಸ ಕಟ್ಟಡಗಳನ್ನು ನಾವು ಕಟ್ಟಿಸಿಕೊಡುತ್ತೇವೆ.

ಮಂಡ್ಯ ಜಿಲ್ಲೆಯಲ್ಲಿರುವ ಹಾಲು ಉತ್ಪಾದಕರಿಗೆ ಹಣ ಸಂದಾಯ ಮಾಡದಿರುವುದರ ಬಗ್ಗೆ

64 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ ಒಟ್ಟು ಎಷ್ಟು ಹಾಲು ಉತ್ಪಾದಕರ ಸಹಕಾರ ಸಂಘಗಳಿವೆ?

ಆ) ಈ ಹಾಲು ಉತ್ಪಾದಕರ ಸಹಕಾರ ಸಂಘಗಳಿಂದ ದಿನಂಪ್ರತಿ ಸಂಗ್ರಹವಾಗುವ ಹಾಲಿನ ಪ್ರಮಾಣ ಎಷ್ಟು?

ಇ) ಮಂಡ್ಯ ಜಿಲ್ಲೆಯಲ್ಲಿನ ಹಾಲು ಉತ್ಪಾದಕರಿಗೆ ಹಾಲು ಉತ್ಪಾದಕರ ಸಹಕಾರ ಸಂಘದಿಂದ ಹಾಲಿನ ದರವನ್ನು ಪಾವತಿ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಹಾಲು ಉತ್ಪಾದಕರಿಗೆ ಹಣ ಪಾವತಿ ಮಾಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) 566

ಆ) ದಿನಂಪ್ರತಿ ಸರಾಸರಿ 1.02 ಲಕ್ಷ ಲೀಟರ್ಗಳು.

ಇ) ಬಂದಿದೆ.

ಈ) ಮಂಡ್ಯ ಹಾಲು ಒಕ್ಕೂಟದಲ್ಲಿ ಸುಮಾರು 4 ಕೋಟಿಯಷ್ಟು ಹಾಲು ಉತ್ಪನ್ನಗಳಿದ್ದು ಈ ಹಾಲು ಉತ್ಪಾದಕಗಳ ಮೇಲೆ ಹಾಲು ಉತ್ಪಾದಕರ ಬಾಕಿ ಹಣ ಪಾವತಿ ಮಾಡಲು ಮಂಡ್ಯ ಜಿಲ್ಲಾ ಸಹಕಾರಿ ಬ್ಯಾಂಕಿನಿಂದ ರೂ. 4.00 ಕೋಟಿ ದುಡಿಯುವ ಬಂಡವಾಳ ಪಡೆಯಲು ಮಂಡ್ಯ ಹಾಲು ಒಕ್ಕೂಟವು ಕ್ರಮ ಜರುಗಿಸಿರುತ್ತದೆ.

ಶ್ರೀ ಎಂ.ಎಸ್. ಆತ್ಮಾನಂದ : ಮಾನ್ಯ ಅಧ್ಯಕ್ಷರೆ, ಸುಮಾರು 566 ಸೊಸೈಟಿಗಳಿಂದ ದಿನಂಪ್ರತಿ 1.02 ಲಕ್ಷ ಲೀಟರುಗಳ ಹಾಲು ಮಂಡ್ಯ ಜಿಲ್ಲೆಯಾದ್ಯಂತ ಸರಬರಾಜು ಆಗುತ್ತಿದೆ ಎಂದು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಈ ರೀತಿ ಸರಬರಾಜಾದ ಹಾಲಿಗೆ ಎಷ್ಟು ಮೊತ್ತದ ಹಣವನ್ನು ಸರ್ಕಾರ ಹಾಲು ಉತ್ಪಾದಕರಿಗೆ ಅಥವಾ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಪಾವತಿ ಮಾಡಬೇಕು. ಹಾಗೂ ಎಷ್ಟು ವಾರಗಳಿಂದ ಹಾಲು ಉತ್ಪಾದಕರಿಗೆ ಈ ಹಣವನ್ನು ಪಾವತಿ ಮಾಡಿಲ್ಲ ಎಂದು ನಾನು ಕೇಳಬಯಸುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯ ಹಾಲು ಒಕ್ಕೂಟಕ್ಕೆ ಎಂಟು ವಾರಗಳಿಂದ ಹಣ ಬಾಕಿ ಕೊಡಬೇಕಾಗಿದೆ. ಸುಮಾರು 3 ಕೋಟಿ 60 ಲಕ್ಷ ರೂಪಾಯಿ ಅರಿಯರ್ಸ್ ಇದೆ. ಆದರೆ 5ನೇ ತಾರೀಖು ಅಂದರೆ ನಾಲ್ಕು ದಿವಸಗಳ ಹಿಂದೆ 70 ಲಕ್ಷ ರೂಪಾಯಿಗಳನ್ನು ಕೇಂದ್ರ ವತಿಯಿಂದ, 30 ಲಕ್ಷ ರೂಪಾಯಿಗಳನ್ನು ಡೈರಿ ವತಿಯಿಂದ ಹೀಗೆ ಒಟ್ಟು ಒಂದು ಕೋಟಿ ರೂಪಾಯಿಗಳನ್ನು ರೈತರಿಗೆ ಹಂಚಲಾಗಿದೆ. ಮತ್ತೆ ಮಂಡ್ಯ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ-ಆಪರೇಟೀವ್ ಬ್ಯಾಂಕ್ನಿಂದ ಒಂದು ಕೋಟಿ ರೂಪಾಯಿ ಸಾಲಕ್ಕೆ ಮಂಜೂರಾತಿ ಆಗಿದೆ. ಅದು ಹಂಚಿದರೆ ಬಹುಶಃ ಆ ಬಾಕಿ ಅತ್ಯಂತ ಕಡಿಮೆ ಬರಬಹುದು ಎಂದು ನನಗನಿಸುತ್ತದೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಕಳೆದ ಅಧಿವೇಶನದಲ್ಲಿ ಬಹಳ ತೀವ್ರವಾಗಿ ಚರ್ಚೆ ಆಯಿತು. ನಾವು ಅವೊತ್ತಿನ ದಿವಸ ತುಮಕೂರಿನ ಬಗ್ಗೆ ಮುಖ್ಯವಾಗಿ ಪ್ರಶ್ನೆ ಮಾಡಿದೆವು. ಆದರೆ ಇವೊತ್ತು ರಾಜ್ಯದಲ್ಲೆಲ್ಲಾ ಇದೇ ಪರಿಸ್ಥಿತಿ ಇದೆ. ಮಂಡ್ಯದ್ದು 8 ವಾರದ್ದು ಬಾಕಿ ಇದೆ ಎಂದು ಹೇಳುತ್ತಿದ್ದಾರೆ. ನನಗೆ ಗೊತ್ತಿರುವ ಹಾಗೆ, ಕೋಲಾರದಲ್ಲಿ 6 ವಾರದ್ದು ಬಾಕಿ ಇದೆ ಎಂದು ಹೇಳುತ್ತಿದ್ದರು. ಇದು ಪ್ರತಿ ದಿವಸ ಹೆಚ್ಚು ಆಗುತ್ತಿದೆ. ಇದು ಮಂಡ್ಯ ಜಿಲ್ಲೆಗೆ ಸೀಮಿತ ಆಗಿದ್ದರೂ ಸಹಾ ವಿಸ್ತಾರವಾಗಿ ರಾಜ್ಯದಲ್ಲಿರತಕ್ಕ ಪರಿಸ್ಥಿತಿ ಬಗ್ಗೆ ಯಾವ ಯಾವ ಯೂನಿಯನ್ನಲ್ಲಿ ಎಷ್ಟೆಷ್ಟು ಹಣ ಬಾಕಿ ಇದೆ ಎನ್ನುವುದನ್ನು ತಿಳಿಸಬೇಕು ಹಾಗೂ ಅದನ್ನು ಕೊಡತಕ್ಕಂಥ ಏರ್ಪಾಟು ಏನು ಮಾಡಿದ್ದಾರೆ ಎನ್ನುವುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಕೆ.ಎನ್. ನಾಗೇಗೌಡ: ಒಟ್ಟು 9 ಜಿಲ್ಲಾ ಹಾಲು ಒಕ್ಕೂಟಗಳ ನಾಲ್ಕು ವಾರಗಳಿಗಿಂತ ಕಡಿಮೆ ಬಾಕಿ ಇದೆ. ತಮ್ಮ ಕೋಲಾರದ ಇವೊತ್ತಿನ ತನಕ ಮೂರು ವಾರದ್ದು ಬಾಕಿ ಇದೆ. ನಾಲ್ಕು ಒಕ್ಕೂಟಗಳಲ್ಲಿ ಮಾತ್ರ 5 ವಾರಕ್ಕಿಂತಲೂ ಜಾಸ್ತಿ ಇದೆ. ಮಂಡ್ಯ ಒಂದೇ ಒಂದು ಒಕ್ಕೂಟದಲ್ಲಿ ಮಾತ್ರ 8 ವಾರಗಳದ್ದು ಬಾಕಿ ಇದೆ. ಹೋದಸಾರಿ ತುಮಕೂರಿನಲ್ಲಿ 14 ವಾರಗಳದ್ದು ಬಾಕಿ ಇತ್ತು 20 ದಿವಸದಲ್ಲಿ ಎರಡೂವರೆ ಕೋಟಿ ರೂಪಾಯಿ ಬಿಡುಗಡೆ ಮಾಡಿ 5 ವಾರಕ್ಕೆ ಬಾಕಿ ತಂದಿದ್ದೇವೆ. ನಾನು ಇವೊತ್ತು ಸ್ಪಷ್ಟವಾದ ಆದೇಶವನ್ನು ಕೇಂದ್ರದ ಮುಖಾಂತರ ಜಿಲ್ಲಾ ಹಾಲು ಒಕ್ಕೂಟಕ್ಕೆ ಕೊಡುತ್ತಿದ್ದೇನೆ.

ಮಾರ್ಚಿ 15ನೇ ತಾರೀಖಿನೊಳಗೆ ಎಲ್ಲಾ ಹಾಲು ಒಕ್ಕೂಟಗಳೂ ಸಹ ಜಿಲ್ಲಾ ಹಾಲು ಒಕ್ಕೂಟದ ಜೊತೆ ಸೇರಿಕೊಂಡು ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘಗಳ ಜೊತೆ ಸೇರಿಕೊಂಡು ಸಾಲವಾಗಿಯಾದರೂ ತಂದುಕೊಂಡು ಎರಡು ವಾರಕ್ಕೆ ಮಾರ್ಚಿ 15ಕ್ಕೆ ನಿಲ್ಲಿಸಬೇಕೆಂದು ಕಟ್ಟು ನಿಟ್ಟಾದ ಆದೇಶವನ್ನು ಕೆ.ಎಂ.ಎಫ್. ಮುಖಾಂತರ ಸರ್ಕಾರ ಕೊಡುತ್ತದೆ ಎಂದು ಹೇಳುತ್ತೇನೆ. ಮಾರ್ಚಿ 15ಕ್ಕೆ ಯಾವುದೇ ಹಾಲು ಒಕ್ಕೂಟ ಎರಡು ವಾರ ಅಥವಾ ಮೂರು ವಾರದ ಮೇಲೆ ಬಾಕಿ ಇರಕೂಡದು ಎನ್ನುವುದನ್ನು ನಿಗದಿ ಮಾಡಿದ್ದೇವೆ. ನಾಲ್ಕು ಕೋಟಿ ರೂಪಾಯಿ ಸಾಲ ಅಪೆಕ್ಸ್ ಬ್ಯಾಂಕಿನಿಂದ ಇವೊತ್ತು ನಾಳೆ ಮಂಜೂರು ಆಗುತ್ತದೆ. ಒಂದು ಕೋಟಿ ರೂಪಾಯಿ ಮಂಡ್ಯ ಡಿ.ಸಿ. ಬ್ಯಾಂಕಿನಿಂದ ಮಂಜೂರಾಗಿದೆ. ಒಂದು ಕೋಟಿ ಬೆಳಗಾಂನಿಂದ ಮಂಜೂರಾಗಿದೆ. ಇವೊತ್ತು ಹಾಲು ಪುಡಿ ಕೂಡ ಮಾರುಕಟ್ಟೆಗೆ ಜಾಸ್ತಿ ಬಂದಿದೆ. ಒಂದು ಲಕ್ಷ ಲೀಟರ್ ಕಳೆದ ಒಂದು ವಾರದಿಂದ ಜಾಸ್ತಿ ಹೋಗುತ್ತಿದೆ. ತುಪ್ಪವನ್ನು ರಾಜಸ್ಥಾನದಿಂದ ಕೊಂಡುಕೊಳ್ಳುವವರು ಬಂದಿದ್ದಾರೆ. ಇವೆಲ್ಲವೂ ಬಹಳ ಆಶಾದಾಯಕವಾಗಿರುವುದರಿಂದ ನಾವು ಮಾರ್ಚಿ 15ಕ್ಕೆ ನಿಗದಿ ಮಾಡಿದ್ದೇವೆ. 13 ಒಕ್ಕೂಟಗಳು ಕೂಡ ರೈತರಿಗೆ ಕೊಡಬೇಕಾದ ಬಾಕಿಯನ್ನು ತೀರಿಸಿ ಎರಡೂ ವಾರಗಳ ಮೇಲೆ ಯಾರೂ ಇಟ್ಟುಕೊಳ್ಳಬಾರದು ಎನ್ನುವ ಆದೇಶವನ್ನು ಕೊಡುತ್ತೇವೆಂದು ಈ ಸದನದ ಮುಖಾಂತರ ತಿಳಿಸಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ.ಎಸ್. ಆತ್ಮಾನಂದ: ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯಲ್ಲಿರತಕ್ಕ ಮನ್ಮೂಲ್ ಡೈರಿ ಏನಿದೆ, ಇದು ನಷ್ಟದಲ್ಲಿ ಹೋಗುತ್ತಿದೆ. ಅಲ್ಲಿರತಕ್ಕ ಉತ್ಪನ್ನಕ್ಕೆ ಸರಿಯಾದ ಮಾರುಕಟ್ಟೆ ಇಲ್ಲ. ಇದರಿಂದ ರೈತರಿಗೆ ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ, ಈ ಮನಮೂಲ್ ಡೈರಿಯನ್ನು ಲಾಭದಾಯಕವಾಗಿ ಮಾಡಲಿಕ್ಕೆ, ಅದರ ಉತ್ಪನ್ನಗಳಿಗೆ ವ್ಯವಸ್ಥಿತವಾದ ಮಾರುಕಟ್ಟೆಯನ್ನು ಒದಗಿಸುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆಂದು ಕೇಳಬಯಸುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ: ಸುಮಾರು 3 ಕೋಟಿ 60 ಲಕ್ಷ ರೂಪಾಯಿಗಳಷ್ಟು ರೈತರ ಬಾಕಿ ಇದೆ. ನಾಲ್ಕು ಕೋಟಿ ಹಾಲು ಉತ್ಪನ್ನಗಳು ನಮ್ಮ ಹತ್ತಿರ ಸ್ಟಾಕ್ ಇದೆ. ಮಂಡ್ಯ ತುಪ್ಪಕ್ಕೆ ಮತ್ತು ಮಂಡ್ಯ ಹಾಲಿನ ಪೌಡರ್ಗೆ ವಿಶೇಷವಾಗಿ ರಾಜಾಸ್ಥಾನದಿಂದ ಕಳೆದ ಮೂರು ದಿವಸದಿಂದ ಆರ್ಡರ್ ಬಂದಿದೆ. ಜೊತೆಗೆ ಎನ್.ಡಿ.ಡಿ.ಬಿ. ಅವರು ಬೇರೆ ಎರಡು ಮೂರು ದೇಶಗಳಿಗೆ ಎಕ್ಸ್ಪೋರ್ಟ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ನಾನು ನೆನ್ನೆ ಕುರಿಯನ್ರವರ ಹತ್ತಿರ ಮಾತನಾಡಿದ್ದೇನೆ, ಆದಷ್ಟು ಬೇಗ ಇರತಕ್ಕಂಥ 6 ಸಾವಿರ ಮೆಟ್ರಿಕ್ ಟನ್ ಪೌಡರನ್ನು ಕರಗಿಸುವುದಕ್ಕೆ ಎಲ್ಲಾ ಪ್ರಯತ್ನ ಮಾಡುತ್ತೇವೆ. ಮಂಡ್ಯ ಜಿಲ್ಲೆಯ ಹಾಲು ಒಕ್ಕೂಟ ಲಾಭದಾಯಕವಾಗಿ ನಡೆಯಬೇಕಾದರೆ ನಾಲ್ಕು ಕೋಟಿ ರೂಪಾಯಿ ಉತ್ಪಾದನೆಯಾಗಿರತಕ್ಕ ಮಿಲ್ಕ್ ಪ್ರಾಡಕಟ್ಸ್ ಏನಿದೆ ಅದನ್ನು ಶೀಘ್ರದಲ್ಲಿ ಮಾರಿ ಲಾಭ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.